ಓ.ಎಸ್.ಸಂ. **127/2010** ಪಿಡಬ್ಲೂ.**1**

<u>ದಿನಾಂಕ **23-03-2022** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ನಂ-**3** ಎ ರಿಂದ **3** ಸಿ ಶ್ರೀ ವಿ.ಆರ್ ಎನ್ ವಕೀಲರಿಂದಃ</u>

**1.** ನಾನು ಮೆಟ್ರಿಕ್ ವರೆಗೆ ವಿಧ್ಯಾಭಾಸ ಮಾಡಿರುತ್ತೇನೆ. ನಾನು 1962 ರಲ್ಲಿ ಮೆಟ್ರಿಕ್ ಮುಗಿಸಿರುತ್ತೇನೆ. ನನ್ನ ಶಿಕ್ಷಣ ಚಿಕ್ಕೋಡಿಯ ಆರ್.ಡಿ ಹೈಸ್ಕೂಲ್ ನಲ್ಲಿ ಆಗಿರುತ್ತದೆ. 1963 ರಿಂದ 2002 ರವರೆಗೂ ನಾನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಕೆಲಸ ಮಾಡಿರುತ್ತೇನೆ. ನಾನು ಕಂಡೆಕ್ಟರ ಅಂತಾ ಕೆಲಸಕ್ಕೆ ಸೇರಿ 1980 ರಲ್ಲಿ ಕಂಟ್ರೋಲರ್ ಆಗಿ ಬಡ್ತಿ ಪಡೆದೆ. ಕಂಡೆಕ್ಟರ ಅಂತಾ ಕೆಲಸ ಮಾಡುತ್ತಿದ್ದಾಗ ತಿಂಗಳಿಗೆ ನನಗೆ 65 ರೂಪಾಯಿ ಸಂಬಳ ಇತ್ತು. ನಾನು ನಿವೃತ್ತಿ ಆಗುವ ಕಾಲಕ್ಕೆ ನನ್ನ ಸಂಬಳ 8,025/- ಇತ್ತು. ನೌಕರಿಯಲ್ಲಿದ್ದಾಗ ನನ್ನ ಸಂಬಳ ನನ್ನ ಬ್ಯಾಂಕ ಖಾತೆಗೆ ಜಮೆ ಆಗುತ್ತಿತ್ತು ಎಂದರೆ ಸರಿಯಲ್ಲ. ಡಿಪೋದಲ್ಲಿ ನಮಗೆ ಸಂಬಳ ನೀಡುತ್ತಿದ್ದರು. ನಾನು ನನ್ನ ಸಂಬಳದ ಯಾವ ಭಾಗವನ್ನು ಬ್ಯಾಂಕನಲ್ಲಿ ಜಮೇ ಮಾಡಿರಲಿಲ್ಲ. ನನ್ನ ಹೆಂಡತಿ ಅಥವಾ ಮಕ್ಕಳ್ಯಾರು ನೌಕರಿ ಪಡೆಯಲಿಲ್ಲ.

**2.** ನನ್ನ ಸಹೋದರ ಲಕ್ಷ್ಮಣ-ಪ್ರತಿವಾದಿ ನಂ-4 ಅವರು ಕೂಡಾ ಮೆಟ್ರಿಕ್ ವರೆಗೆ ವಿಧ್ಯಾಭಾಸ ಮಾಡಿದ್ದಾರೆ. ಅವರು ವಾಣಿಜ್ಯ ಇಲಾಖೆಯಲ್ಲಿ ಕ್ಲರ್ಕ ಅಂತಾ ಕೆಲಸಕ್ಕೆ ಸೇರಿದ್ದರು. ಅವರು ತಮ್ಮ ಸಂಬಳದ ಹಣವನ್ನು ಬ್ಯಾಂಕನಲ್ಲಿ ಇಟ್ಟಿದ್ದರೋ ಇಲ್ಲವೋ ಗೊತ್ತಿಲ್ಲ. ಪ್ರತಿವಾದಿ ನಂ-4 ರವರು ನೌಕರಿ ಸೇರಿದಾಗಿನಿಂದಲೂ ಈ ದಾವೆ ಸಲ್ಲಿಸುವಾಗಲೂ ನಿಪ್ಪಾಣಿಯಲ್ಲಿಯೇ ವಾಸವಾಗಿದ್ದರು. ಈ ದಾವೆ ಸಲ್ಲಿಸುವಾಗ ನನ್ನ ಮತ್ತು ಪ್ರತಿವಾದಿ ನಂ-4 ರವರ ಸಂಬಂಧ ಚೆನ್ನಾಗಿತ್ತು. ಈ ದಾವೆ ಸಲ್ಲಿಸುವ ಮೊದಲು ನನ್ನ ಹಾಗೂ 4 ನೇ ಪ್ರತಿವಾದಿಯ ನಡುವೆ ನಮ್ಮ ಸಂಬಳ, ಉತ್ಪನ್ನ ಹಾಗೂ ಖರ್ಚು ಇತ್ಯಾದಿಗಳ ಬಗ್ಗೆ ಚರ್ಚೆ ನಡೆದಿರಲಿಲ್ಲ. ನನ್ನ ಅಜ್ಜನ ಪೂರ್ಣ ಹೆಸರು ಬಾಳಪ್ಪಾ ರಾಯಪ್ಪ ಹೊಲೇರ. ಅವರಿಗೆ ನಾನು ನೋಡಿರುತ್ತೇನೆ. ಅವರು ಯಾವ ವರ್ಷದಲ್ಲಿ ಮರಣ ಹೊಂದಿದರು ಎಂದು ನನಗೆ ಹೇಳಲು ಆಗುವುದಿಲ್ಲ.

**3.** ಬಾಳಪ್ಪ ರವರು ಮೂಲ ಊರು ಕರಗಾಂವ ಎಂದರೆ ಸರಿ. ಅಲ್ಲಿ ಅವರ ಮೂಲ ಕೆಲಸ ವ್ಯವಸಾಯ ಎಂದರೆ ಸರಿ. ನನ್ನ ತಂದೆ ರಾಯಪ್ಪರವರ ಮೂಲ ಕೆಲಸ ಕೂಡಾ ವ್ಯವಸಾಯ ಎಂದರೆ ಸರಿ. ನನ್ನ ಸಹೋದರರಾದ ಪ್ರತಿವಾದಿ 1 ರಿಂದ 3 ರವರ ಮೂಲ ಕೆಲಸ ಕೂಡಾ ವ್ಯವಸಾಯ ಎಂದರೆ ಸರಿ. ವ್ಯವಸಾಯದಿಂದ ಬಂದ ಉತ್ಪದಿಂದಲೇ ತಮ್ಮ ಜಮೀನಿನ ವ್ಯವಸಾಯ ಮಾಡುವ ಬೇರೆಯವರ ಜಮೀನಿನ ವ್ಯವಸಾಯವನ್ನು ಹಾಗೂ ಪ್ರಾಪಂಚಿಕ ವ್ಯವಸಾಯವನ್ನು ಮಾಡುತ್ತಿದ್ದರು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಬಾಳಪ್ಪ ನವರ ಹೆಸರಿನಲ್ಲಿ 5 ಸರ್ವೆ ನಂಬರಗಳ ಜಮೀನು ಇದ್ದವು. ಸದರಿ ಜಮೀನುಗಳ ಪತ್ರಗಳು ಯಾವ ಡೈರಿಯ ಆಧಾರದ ಮೇಲೆ ಹಾಗೂ ಯಾವ ವರ್ಷದಿಂದ ಅವರ ಹೆಸರಿನಲ್ಲಿ ನಮೂದಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ.

**4.** ಬಾಳಪ್ಪನ ಮರಣ ನಂತರ ಅವರ ಹೆಸರಿನಲ್ಲಿರುವ ಜಮೀನು ನನ್ನ ತಂದೆ ರಾಯಪ್ಪನವರ ಹೆಸರಿಗೆ ಬದಲಾವಣೆ ಆದವು ಎಂದರೆ ಸರಿ. ಯಾವ ಡೈರಿಯ ಆಧಾರದ ಮೇಲೆ ಅವರ ಹೆಸರಿನಲ್ಲಿ ನಮೂದಿದ್ದವು ಎಂದು ನನಗೆ ಹೇಳಲು ಬರುವುದಿಲ್ಲ. 1985 ನೇ ಸಾಲೀನಲ್ಲಿ ಜಮೀನುಗಳು ನನ್ನ ತಂದೆ ಹೆಸರಿಗೆ ವರ್ಗಾವಣೆಗೊಂಡವು. ನನ್ನ ತಂದೆ 05-01-1990 ರಲ್ಲಿ ಮರಣ ಹೊಂದಿದರು ಎಂದರೆ ಸರಿ. ನನ್ನ ತಾಯಿಯ ಹೆಸರು ಅವ್ವುಬಾಯಿ ಎಂದರೆ ಸರಿ. ನನ್ನ ತಂದೆ ಮರಣದ ನಂತರ ನನ್ನ ತಾಯಿ ಮರಣ ಹೊಂದಿರುತ್ತಾರೆ.

**5.** ನನ್ನ ತಂದೆಯ ಮರಣಾನಂತರ ಅವರ ಹೆಂಡತಿ, ಗಂಡು ಮಕ್ಕಳು, ಹೆಣ್ಣು ಮಕ್ಕಳ ಹೆಸರಿಗೆ ವಾರಸಾ ನಾತೆ ಆಸ್ತಿಯ ಖಾತೆ ಬದಲಾವಣೆ ಆಗಿರುತ್ತವೆ. ಯಾವ ಡೈರಿ ಆಧಾರದ ಮೇಲೆ ಅಂತಾ ನನಗೆ ಗೊತ್ತಿಲ್ಲ. ನಾನು ಸದರಿ ಡೈರಿ ನೋಡಿರುವುದಿಲ್ಲ. ಸದರಿ ಡೈರಿಯ ಬಗ್ಗೆ ವಿಚಾರಿಸಿ ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನನ್ನ ಅಜ್ಜನ ಹೆಸರಿನಲ್ಲಿ ಕರಗಾಂವ ಗ್ರಾಮದಲ್ಲಿ ಒಂದು ಮನೆ ಮತ್ತು ಒಂದು ಖುಲ್ಲಾ ಜಾಗೆ ಆಸ್ತಿ ಇತ್ತು. ಸದರಿ ಮನೆಯ ಆಸ್ತಿ ನಂಬರ 156 ಹಾಗೂ ಖುಲ್ಲಾ ಜಾಗಾದ ನಂ-188 ಅಂತಾ ಇತ್ತು. ಸದರಿ ಆಸ್ತಿಗಳು ಗ್ರಾಮ ಪಂಚಾಯತ ಕಡತಗಳಲ್ಲಿ ಹಾಲಿ ಮಹಾದೇವಿ ಚಿದಾನಂದ ತಾಯವ್ವಗೋಳ ರವರ ಹೆಸರಿನಲ್ಲಿ ಇವೆ. ಅವರ ಹೆಸರಿನಲ್ಲಿ ಯಾವ ವರ್ಷ ಹಾಗೂ ಯಾವ ಠರಾವಿನ ಆಧಾರದ ಮೇಲೆ ಆಸ್ತಿ ನಮೂದು ಆದವು ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ಆಸ್ತಿಗಳಿಗೆ ಸಂಬಂಧಪಟ್ಟಂತೆ ನನ್ನ ಹೆಸರನ್ನು ಕೂಡಾ ನಮೂದಿಸಬೇಕೆಂದು ಯಾವುದೇ ಅರ್ಜಿ ಸಲ್ಲಿಸಲಿಲ್ಲ. ಅರ್ಜಿ ಸಲ್ಲಿಸಲು ನಿಮಗೆ ಅಡಚಣೆ ಇತ್ತಾ ಎಂಬ ಪ್ರಶ್ನೆಗೆ ತಾನು ನೌಕರಿಯಲ್ಲಿದ್ದರಿಂದ ಮುಂದಿನ ದಿನಗಳಲ್ಲಿ ಆಸ್ತಿಗಳನ್ನು ತಮಗೆ ಕೊಡುತ್ತಾರೆ ಎಂಬ ಕಾರಣಕ್ಕೆ ಆಸ್ತಿಗಳನ್ನು ಮಹಾದೇವಿರವರ ಹೆಸರಿಗೆ ಖಾತೆ ಬದಲಾವಣೆ ಮಾಡಿಸಿದೆ. ನೌಕರಿದಾರರಿಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹೆಸರು ನೊಂದಾವಣೆಗೆ ಅಡ್ಡಿ ಇದೆ ಎಂಬಂತೆ ಯಾವ ಕಾಯ್ದೆ ನನಗೆ ಸಿಕ್ಕಿರುವುದಿಲ್ಲ.

**6.** ಕರಗಾಂವ ಗ್ರಾಮ ಪಂಚಾಯತ ಆಸ್ತಿ ನಂ-24 ಮತ್ತು 79 ಇವುಗಳು ಕೂಡಾ ನನ್ನ ಅಜ್ಜ ಬಾಳಪ್ಪ ಮತ್ತು ನನ್ನ ತಂದೆ ರಾಯಪ್ಪರವರಿಗೆ ಸಂಬಂಧಪಟ್ಟ ಆಸ್ತಿಗಳು ಇರುತ್ತವೆ ಎಂದರೆ ಸರಿ. ಸದರಿ ಆಸ್ತಿಗಳ ಕರ ಆಕರಣೆ ಉತಾರಗಳನ್ನು ನಾನು ಈಹೊತ್ತಿನ ವರೆಗೂ ಪರಿಶೀಲಿಸುವ ಸಂದರ್ಬ ಬಂದಿರುವುದಿಲ್ಲ. ಬಾಳಪ್ಪನವರು ಮರಣ ಹೊಂದುವ ಕಾಲಕ್ಕೆ ಅಥವಾ ಅದಕ್ಕಿಂತಲೂ ಪೂರ್ವದಲ್ಲಿ ಬ್ಯಾಂಕನಲ್ಲಾಗಲೀ ಅಥವಾ ಹಣಕಾಸು ಸಂಸ್ಥೆಯಲ್ಲಾಗಲೀ ಹಣ ಠೇವಣೆ ಇರಲಿಲ್ಲ. ಬಾಳಪ್ಪನವರು ಅವರ ಮಗ ಮತ್ತು ಮೊಮಕ್ಕಳ ಹೆಸರಿನಲ್ಲಿ ಠೇವಣಿ ಇಟ್ಟಿರಲಿಲ್ಲ. ನನ್ನ ತಂದೆ ಯವರು ಅವರ ಹೆಸರಿನಲ್ಲಾಗಲೀ ಅಥವಾ ನನ್ನ ತಾಯಿಯ ಹೆಸರಿನಲ್ಲಿರಲ್ಲಾಗಲೀ ಬ್ಯಾಂಕನಲ್ಲಾಗಲೀ ಅಥವಾ ಹಣಕಾಸು ಸಂಸ್ಥೆಯಲ್ಲಾಗಲೀ ಹಣ ಠೇವಣೆ ಇಟ್ಟಿರಲಿಲ್ಲ. ನನ್ನ ಸಹೋದರರು ಬ್ಯಾಂಕನಲ್ಲಾಗಲೀ ಅಥವಾ ಹಣಕಾಸು ಸಂಸ್ಥೆಯಲ್ಲಾಗಲೀ ಹಣ ಠೇವಣೆ ಇಟ್ಟಿರುವ ಬಗ್ಗೆ ವಿಚಾರಣೆ ಮಾಡಿಲ್ಲ. ಅದನ್ನು ವಿಚಾರಣೆ ಮಾಡಲು ನನಗೆ ಅಡಚಣೆ ಇರಲಿಲ್ಲ. ನನ್ನ ಅಜ್ಜ ಮತ್ತು ತಂದೆ ಜೀವಂತವಿರುವಾಗ ಅವರ ಉತ್ಪನ್ನ ಮತ್ತು ಖರ್ಚು ಸರಿ ಸಮ ಇರುತ್ತಿತ್ತು ಎಂಬ ಸೂಚನೆಗೆ ಸಾಕ್ಷಿ ಅವರಿಗೆ ಹೆಚ್ಚು ಉತ್ಪನ್ನ ಇರಲಿಲ್ಲ ಎಂದು ನುಡಿಯುತ್ತಾರೆ. ತಮ್ಮ ಜಮೀನಿನಲ್ಲಿರುವ ಉತ್ಪನ್ನ ಖರ್ಚಿಗೆ ಸಾಕಾಗುತ್ತಿರಲಿಲ್ಲವಾದ್ದರಿಂದ ಅವರು ಬೇರೆಯವರ ಜಮೀನಿನಲ್ಲಿ ಉಳುವೆ ಮಾಡುತ್ತಿದ್ದರು ಎಂದರೆ ಸರಿ. ನಾನು ನೌಕರಿ ಮಾಡುವ ಕಾಲಕ್ಕೆ ಪ್ರತಿವಾದಿ ನಂ-1 ರಿಂದ 3 ರವರ ವಾರ್ಷಿಕ ಉತ್ಪನ್ನ ಹಾಗೂ ಖರ್ಚನ್ನು ನಾನು ವಿಚಾರಣೆ ಮಾಡಿಲ್ಲ. ಅವರ್ಯಾರು ತಮ್ಮ ಉತ್ಪನ್ನ ಹಾಗೂ ಖರ್ಚನ್ನು ನನಗೆ ಹೇಳಿಲ್ಲ.

**7.** ದಾವಾ ಆಸ್ತಿಗಳಲ್ಲಿ ಸರ್ವೆ ನಂಬರ 21/2 ಎ/1, 21 ಸಿ, 21 ಡಿ ಆಸ್ತಿಗಳು ಸದರಿ ಜಮೀನುಗಳು 3 ನೇ ಪ್ರತಿವಾದಿ ಚಿದಾನಂದ ರವರ ಹೆಸರಿನಿಂದ ಖರೀದಿಯಾಗಿವೆ ಎಂದರೆ ಸರಿ. ಸದರಿ ಜಮೀನಿನ ಮೂಲ ಮಾಲೀಕರು ಎಸ್ ಎಚ್ ಕುಲಕರ್ಣಿ. ಸದರಿ 3 ಜಮೀನುಗಳ ಖರೀದಿ ಒಂದೇ ಖರೀದಿ ಪತ್ರದಲ್ಲಿ ಆಗಿರುತ್ತದೆ. ಸದರಿ ಖರೀದಿ ಪತ್ರವನ್ನು ನಾನು ನೋಡಿಲ್ಲ. ಸದರಿ ಖರೀದಿ ಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿಲ್ಲ. ನನ್ನ ಹೆಸರಿನಲ್ಲಿ ಖರೀದಿಯಾಗಿರುವುದಿಲ್ಲ. ನಾನು ಸಾಕ್ಷಿದಾರನಾಗಿಯೂ ಸಹಿ ಮಾಡಿಲ್ಲ. ಸಾಕ್ಷಿ ಮುಂದುವರೆದು ಚಿದಾನಂದರವರ ಹೆಸರಿನಿಂದಾ ನಾನೇ ಖರೀದಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಖರೀದಿ ಯಾವ ದಿನಾಂಕದಂದು ಆಗಿದೆ ಎಂದು ನನಗೆ ಹೇಳಲು ಆಗುವುದಿಲ್ಲ. 11 ಸಾವಿರ ರೂಪಾಯಿಗೆ ಖರೀದಿ ಆಗಿರುತ್ತದೆ. ಆ ರೀತಿ ಹೇಳಲು ನನ್ನ ಬಳಿ ಖರೀದಿ ಪತ್ರದ ನಕಲು ಇರುವುದಿಲ್ಲ. ಅದರ ಬಗ್ಗೆ ಸರ್ಕಾರಿ ಮಾನ್ಯದ ಪತ್ರ ನನ್ನ ಬಳಿ ಇರುವುದಿಲ್ಲ. ಸದರಿ ಖರೀದಿ ಪತ್ರವನ್ನು ಸಿದ್ದಯ್ಯಾ ಹಿರೇಮಠ ರವರು ಬರೆದಿರುತ್ತಾರೆ. ಸದರಿ ಖರೀದಿ ಪತ್ರಕ್ಕೆ ಯಾರು ಸಾಕ್ಷಿದಾರರಾಗಿರುತ್ತಾರೆ

ಅಂತಾ ನನಗೆ ಗೊತ್ತಿಲ್ಲ. ಖರೀದಿ ಪತ್ರ ಆಗುವ ಕಾಲಕ್ಕೆ ಜಮೀನುಗಳು ಎಸ್ ಎಚ್ ಕುಲಕರ್ಣಿ ರವರ ಪತ್ನಿಯ ಹೆಸರಿನಲ್ಲಿ ಇದ್ದವು. ಅವರ ಹೆಸರು ಗೊತ್ತಿಲ್ಲ. ಸದರಿ ಜಮೀನುಗಳು ನಾರಾಯಣ ಹರಿ ಕುಲಕರ್ಣಿ, ಸುನಂದ ರವೀಂದ್ರ ಕುಲಕರ್ಣಿ, ಮಹೇಶ ಶ್ರೀಧರ ಕುಲಕರ್ಣಿ ರವರ ಹೆಸರಿನಲ್ಲಿ ಇದ್ದವು ಎಂದರೆ ನನಗೆ ಗೊತ್ತಿಲ್ಲ.

**8.** ಸರ್ವೆ ನಂಬರ 21/2 ಸಿ, 15 ಗುಂಟೆ ಜಮೀನು ಪ್ರವಾದಿ ನಂ-3 ರವರ ಹೆಸರಿನಿಂದ 2 ಸಾವಿರ ರೂಪಾಯಿಗೆ ಖರೀದಿಯಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ 21/2 ಎ/1, ಮತ್ತು 21/2 ಡಿ/1, ಇವು ಮಾರಾಟ ಮಾಡುವ ಕಾಲಕ್ಕೆ ಯಾರ ಹೆಸರಿನಲ್ಲಿ ಇದ್ದವು ಎಂದು ನಾನು ವಿಚಾರಿಸಿರಲಿಲ್ಲ. ಈ ಎರಡು ಜಮೀನನ್ನು ಯಾವ ದಿನಾಂಕದಂದು ಮಾರಾಟ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನುಗಳನ್ನು 3 ನೇ ಪ್ರತಿವಾದಿ ದಿನಾಂಕ 09-08-1995 ರಂದು 34 ಸಾವಿರ ರೂಪಾಯಿಗೆ ನೊಂದಾಯಿತ ಖರೀದಿ ಪತ್ರದ ಮೂಲಕ ಖರೀದಿಸಿದರು ಎಂದರೆ ಗೊತ್ತಿಲ್ಲ. ಸಾಕ್ಷಿ ಸ್ವ-ಇಚ್ಚೆಯಿಂದ 34 ಸಾವಿರ ಹಣ ಇರಲೇ ಇಲ್ಲ ಎಂದು ನುಡಿಯುತ್ತಾರೆ. ದಿನಾಂಕ 09-08-1995 ರಂದು ಯಾವುದೇ ಬ್ಯಾಂಕನಲ್ಲಿ ಹಣ ಇರಲಿಲ್ಲ. ಆದರೆ ಪ್ರಾವಿಡೆಂಟ್ ಫಂಡದಲ್ಲಿ ಇತ್ತು. ಪ್ರಾವಿಡೆಂಟ್ ಫಂಡ ಯಾವ ತಾರೀಖಿನಂದ ಬಂದಿರುತ್ತದೆ ಎಂದು ಹೇಳಲು ಆಗುವುದಿಲ್ಲ.

**9.** ನಾನು 3 ನೇ ಪ್ರತಿವಾದಿಗೆ 34 ಸಾವಿರ ರೂಪಾಯಿಯನ್ನು ಜಮೀನು ಖರೀದಿಸಲು ನೀಡಿದ್ದೆ ಎಂದು ತೋರಿಸಲು 3 ನೇ ಪ್ರತಿವಾದಿ ನನಗೆ ಯಾವುದೇ ದಾಖಲೆಯನ್ನು ಬರೆದುಕೊಟ್ಟಿರುವುದಿಲ್ಲ. ಪ್ರಾವಿಡೆಂಟ್ ಫಂಡ್ ಹೂರತುಪಡಿಸಿ ಆ ದಿನದಂದು ನನ್ನ ಬಳಿ 34 ಸಾವಿರ ಇತ್ತು ಎಂದು ತೋರಿಸಲು ನನ್ನ ಬಳಿ ಸರ್ಕಾರ ಮಾನ್ಯದ ಯಾವುದೇ ದಾಖಲೆ ಇರಲಿಲ್ಲ. ಪ್ರಾವಿಡೆಂಟ್ ಫಂಡ್ ನನ್ನ ಖಾತೆಗೆ ಜಮಾ ಆಗಿರುವುದಿಲ್ಲ ಅದನ್ನು ನಗದು ರೂಪದಲ್ಲಿ ನೀಡುತ್ತಾರೆ. ಪ್ರಾವಿಡೆಂಟ್ ಫಂಡ್ ನು ನಾನು ನಿವೃತ್ತಿಯಾಗುವ ಕಾಲಕ್ಕೆ ನೀಡುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದ ಮಧ್ಯದಲ್ಲಿ ಸಾಲ ನೀಡುತ್ತಾರೆ ಎಂದು ನುಡಿಯುತ್ತಾರೆ. ನಾನು 40 ಸಾವಿರ ರೂಪಾಯಿಯನ್ನು ಸಾಲ ಪಡೆದುಕೊಂಡಿರುತ್ತೇನೆ. ಯಾವ ತಾರೀಖು ಎಂದು ನೆನಪಿಲ್ಲ.

(ಈ ಸಂದರ್ಭದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕೋರಿಕೆಯ ಮೇರೆಗೆ ಮುಂದೂಡಲಾಯಿತು)

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಲಾಗಿದೆ).

ಓ.ಹೆ.ಕೆ.ಸರಿ ಇದೆ.

**(ಅಶೋಕ ಆರ್.ಹೆಚ್.)**
**1** ನೇ ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ**,** ಚಿಕ್ಕೋಡಿ.